‘ನೋಡಿರೇನು ಅಣ್ಣಗೋಳ್ರಾ, ಗಂಡ ತನ್ನ ಅಬರು ತಾನೇ ಹೆಂಗ ತಕ್ಕೋತಾನು. ಕಂಡಕ್ಟರ್ ಕಡೀಂದ ತರಿಸಿದ್ರ ಏನು ತಪ್ಪಾತು. ತಾನೂ ತರಂಗಿಲ್ಲ. ಇತ್ತೀಚೆಗೆ ಇಂವನ ಕಡೆ ದುಡ್ಡೇ ಇರಂಗಿಲ್ಲ. ಇಂವನ ಮಾರಿಗೆ ಅಲ್ಲಿ ಉದ್ರಿನೂ ಕೊಡಂಗಿಲ್ಲ. ಮಕ್ಕಳ ಸಾಲಿ ಫೀ ಕೊಡು ಅಂದ್ರ ಇಲ್ಲ! ಹೊಟೇಲ್ ಸಾಮಾನು ತಗೊಂಬಾರೋ ಅಂದ್ರ ಇಲ್ಲ! ಒಟ್ಟಾರೆ ಎಲ್ಲಾದಕ್ಕೂ ಇಲ್ಲ, ಇಲ್ಲ, ಇಲ್ಲ! ಇಷ್ಟು ದಿನ ದುಡಿದಿದ್ದು ರೊಕ್ಕ ಎಲ್ಲಿಟ್ಟಾನ? ಅವರ ಅವ್ವನ ಕಡೆ ಕೊಟ್ಟ ಬಂದಿರಬೇಕು. ಒಂದಿನಾ ಎಲ್ಲಾ ಹೊರಗ ತೆಗಿತೇನಿ.’

ಅನಸವ್ವ ಒಂದೊಂದು ಸಲ ಹುಚ್ಚು ಹಿಡಿದವಳಂತೆ ಒದರುತ್ತಿದ್ದಳು. ರಾತ್ರಿ ಸುರುವಾಗುವ ಅವರ ಜಗಳ ಬೆಳಕಾದರೂ ಮುಗಿಯುತ್ತಿರಲಿಲ್ಲ. ಶಾಂತವಾಯಿತು ಎನ್ನುವುದರೊಳಗೆ ವಟವಟಾ ಮತ್ತೆ ಸುರುವಾಗುತ್ತಿತ್ತು. ಕೆಲವೊಮ್ಮೆ ಗಂಡನಿಗೆ ಮಗಳ ಮೇಲೆ ಹಾಸಿ ಬೈಯುತ್ತಿದ್ದಳು.

‘ಮಗಳೆ ನಮ್ಮ ನಸೀಬು ಇಷ್ಟೇ ತಗೋ, ಚಾದಂಗಡಿಯವಗ ಏನು ಕೊಡ್ತೀರಿ ಅಂತ ನಮ್ಮ ದೊಡ್ಡಪ್ಪ ಹೇಳಿದ್ದ. ಆದ್ರ ಗಂಡು ಕಂಡೇವೋ ಇಲ್ಲೋ ಅನ್ನೂಹಂಗ ಅವ್ವಅಪ್ಪ ಈ ಯಬರೇಶಿಗೆ ತಂದು ನನ್ನ ಕಟ್ಟಿದರು.’ ಹೆಚ್ಚಾಗಿ ನಿರ್ಲಕ್ಷ್ಯ ಮಾಡುವ ಅವನು ಆ ಸಲ ಉರಿದು ಬಿದ್ದ. ‘ಹೌದು ನೋಡು. ನಾನು ಎದಕ್ಕೂ ರೊಕ್ಕ ಇಲ್ಲದಾಂವ. ಮದುವೆಯಾಗೊ ಮುಂಚೆ ತಿಳಿಲಿಲ್ಲೇನು?’

‘ಹೌದೋ ಗಜವೀರ. ಎಲ್ಲಾ ಗೊತ್ತಿದ್ದೂ ನಾವು ಮದುವಿ ಮಾಡಿಕೊಂಡ್ವಿ. ಅದೇ ತಪ್ಪಾಗೇತಿ. ನಾ ದುಡೀಲಿಲ್ಲಂದ್ರ ನೀನು ಇಷ್ಟೊತ್ತಿಗೆ ದೇಶಾಂತರ ಹೋಗಿರತಿದ್ದಿ. ಈ ಚಾದಂಗಡಿಗೆ ದುಡಿದಿದ್ದು ನಾನು. ಬೆಳೆಸಿದ್ದು ನಾನು. ಇದರ ಹೊಟ್ಟೆ ಬಟ್ಟೆಗೆ ತಂದು ಹಾಕಿದ್ದು ನಾನು. ನೀನೇನು ಮಾಡೀದಿ? ಜೊಲ್ಲು ಸುರಿಸ್ಕೋತ ಊರೂರು ತಿರುಗೀದಿ. ಹೊಳ್ಳಿ ಹೆಂಡತಿಮಕ್ಕಳಿಗೆ ಏನೂ ಇರಲಾರದಂಗ ಮಾಡಾಕಹತ್ತೀದಿ.’

‘ನೋಡು, ನೀನು ಚೆಂದಾಗಿ ಇದ್ದಿದ್ರ ನಾನ್ಯಾಕ ಹೋಗತಿದ್ದೆ. ನಿಂದೆಲ್ಲ ನನಗೆ ಗೊತ್ತಿಲ್ಲೇನು? ವಾರಕ್ಕೊಮ್ಮೆ ಹೊಂಗಲಕ್ಕೆ ಯಾಕ ಹೊಕ್ಕೀದಿ? ಯಾರನ್ನ ಭೆಟ್ಟಿಯಾಗತೀದಿ?’

‘ಏನ್ ಗೊತ್ತಿದೆ? ಯಾಕ ಹೋಗ್ತೆನಿ? ಹೇಳೋ. ಬಾಯ್ಬಿಡು. ನಾ ಹೋಗಿ ತರಲಿಲ್ಲಂದ್ರ ನಿನ್ನ ಹೊಟೇಲ ಎಲ್ಲಿ ನಡೀತಿತ್ತು. ನಿನ್ನ ಹೊಟ್ಟೆ ಹೆಂಗ ತುಂಬತಿತ್ತು. ಎರಡು ಎಕರೆ ಹೊಲ ಹೆಂಗ ಹಿಡಿತಿದ್ದೋ ಕೆರಕ ಮಾರಿಯವನೆ.’

ಅನಸವ್ವ ಸಟಕ್ಕನೆ ಎದ್ದು ಕೈಗೆ ಸಿಕ್ಕ ನೀರಿನ ಚರಿಗೆಯೊಂದನ್ನು ಗಂಡನತ್ತ ಬೀಸಿ ಒಗೆದಳು. ಅದು ನೀರಿನ ಟಾಕಿಗೆ ಬಡಿದು ದೊಡ್ಡ ಸಪ್ಪಳವಾಯಿತು. ಗಾಜಿನ ಕಪಾಟಿಗೆ ಬಡಿಯುವುದು ಸ್ವಲ್ಪದರಲ್ಲಿಯೇ ತಪ್ಪಿತು. ಅದರಲ್ಲಿಯ ನೀರು ಅವನ ಮುಖಕ್ಕೆ ಗೊಜ್ಜಿದಂತೆ ಸಿಡಿಯಿತು. ಅಷ್ಟೊತ್ತಿಗೆ ಮಕ್ಕಳು ದೊಡ್ಡ ದನಿಯಲ್ಲಿ ಅಳತೊಡಗಿದರು. ಏನಾದರೂ ಅನಾಹುತ ನಡೆದೀತೆಂದು ಬಾಜು ಮನೆಯ ಮಲ್ಲವ್ವತ್ತೆ ದುಡುದುಡು ಓಡಿಬಂದು ದಬದಬ ಬಾಗಿಲು ಬಡಿದಳು. ಅವ್ವ ಹೇಳಿದ ಮೇಲೆ ದೊಡ್ಡ ಮಗಳು ನಿವೇದಿತಾ ಬಾಗಿಲು ತೆಗೆದಳು. ಪಡಸಾಲೆಯಲ್ಲಿ ಇನ್ನು ಉರುಳುತ್ತಲೇ ಇದ್ದ ಚರಿಗೆಯನ್ನು ಮಲ್ಲವ್ವತ್ತೆ ಎತ್ತಿ ಇಟ್ಟಳು.

‘ಅತ್ತಿ, ನೋಡು. ಇಂವ ನನ್ನನ್ನ ಮತ್ತು ಮಕ್ಕಳನ್ನ ಕೊಂದೇ ಬಿಡ್ತಾನ. ಇಂವಗ ಯಾರೂ ಹೇಳಾವ್ರು, ಕೇಳಾವ್ರು ಇಲ್ಲ. ನನ್ನ ಬಾಳೆ ಹೀಂಗ್ಯಾಕ ಆತಬೇ ಮಲ್ಲವ್ವತ್ತಿ?’ ಅನಸವ್ವ ದೊಡ್ಡ ದನಿ ತೆಗೆದು ಅಳತೊಡಗಿದಳು. ನಾ ಕೂಡು, ನೀ ಕೂಡು, ಅವರು ಕೂಡು, ಇವರು ಕೂಡು ಎಂದು ಚಾದಂಗಡಿಯಲ್ಲಿ ಜನಜಂಗುಳಿಯೆ ಸೇರಿತು. ಮೊನ್ನೆ ಮೊನ್ನೆಯಷ್ಟೇ ಪ್ರೀತಿಪ್ರೇಮಕ್ಕೆ ಹೆಸರಾಗಿದ್ದವರು ಈಗ ಬೆಕ್ಕು ನಾಯಿಯ ತರಹ ಜಗಳವಾಡುತ್ತಿದ್ದಾರೆಯೆ? ಯಾರೋ ದೇವಪ್ಪಕಾಕಾನನ್ನು ಕರೆದುಕೊಂಡು ಬಂದರು. ಆತ ದೇವಪ್ಪನ ಹೆಗಲ ಮೇಲೆ ಕೈ ಹಾಕಿ ಸಮಾಧಾನಪಡಿಸಿದ. ದೇವಪ್ಪ ಏನೋ ಹೇಳಬೇಕೆಂದು ಬಾಯಿ ತೆರೆದರೆ ಕಾಕಾ ಅವನ ಬಾಯಿ ಮುಚ್ಚಿದ.

‘ನೀ ಏನೂ ಮಾತನಾಡತಕ್ಕದ್ದಲ್ಲ. ಸುಮ್ಮನಿರು ಅಂದ್ರೆ ಸುಮ್ಮನಿರು. ಅಷ್ಟೇ. ನನ್ನ ಮಾತು ಕೇಳ್ತಿಯಿಲ್ಲೋ.’ ಅನಸವ್ವ ಒದರಾಡುವುದು ನಿಲ್ಲಲಿಲ್ಲ. ‘ಆಕಿ ಬೈಯಲಿ. ನೀ ಸುಮ್ಮನಿರು.’ ಸ್ವಲ್ಪ ಸಮಯದ ಬಳಿಕ ಅವಳೂ ಸುಮ್ಮನಾದಳು. ಎಷ್ಟೊಂದು ಅನ್ಯೋನ್ಯವಾಗಿದ್ದವರ ಜಗಳ ನೋಡುವುದಾಯಿತಲ್ಲ! ಕೆಲವರು ಬೆರಗುಪಟ್ಟರು. ‘ಇವರನ್ನ ಭಾಳ ಸಾಧುಗಳು ಅನಕೊಂಡಿದ್ವಿ. ನಮ್ಮ ಮನಿಯೊಳಗ ಜಗಳಜೂಟು ಇದ್ದರೂ ಇಷ್ಟು ಕೆಟ್ಟದಾಗಿ ನಾವೇನು ಹಾಕ್ಯಾಡಂಗಿಲ್ಲ. ಈಕೇನೆ ಯವ್ವಾ ಅನಸವ್ವ, ನೋಡಾಕ ಎಷ್ಟು ಚೆಂದ ಛಾಯಿ ಅದಾಳ. ಜಗಳಕ್ಕ ನಿಂತರ ಗಂಡನ ಕೊಳ್ಳಪಟ್ಟಿ ಹಿಡಿತಾಳ. ಅವನ ಕೈ ಗೀರತಾಳ. ಅಂವಗೆ ಒದಿತಾಳ. ಪಾಪ, ದೇವ್ಯಾನ ಪರಿಸ್ಥಿತಿ ಯಾರಿಗೂ ಬ್ಯಾಡ.’ ಜಗಳ ಮುಗಿದರೂ ಇನ್ನು ಮಂದಿ ಮನೆಬಿಟ್ಟು ಹೋಗಲೊಲ್ಲರು.

‘ನಡೀರಿ ಎಲ್ಲಾರೂ ನಿಮ್ಮ ನಿಮ್ಮ ಮನಿಗೆ. ದೇವಪ್ಪ ಅನಸವ್ವ ಸುಮ್ಮನಾಗ್ತಾರು. ಯಾರ ಮನ್ಯಾಗ ಜಗಳ ಇರಂಗಿಲ್ಲ. ಹೌದಲ್ಲೋ ದೇವಣ್ಣ. ನಾಳೆ ಮುಂಜಾನೆ ಉಪ್ಪಿಟ್ಟು ಚುಲೋ ಆಗಿರಬೇಕು. ಇವರೆಲ್ಲ ಬರ್ತಾರು ಮತ್ತ.’

ಜಗಳ ನೋಡಲು ಬಂದವರಲ್ಲಿ ಯಲ್ಲವ್ವನನ್ನು ಕಂಡು ದುಂಡಪ್ಪಕಾಕಾನಿಗೆ ತುಸು ಆಶ್ಚರ್ಯವಾಯಿತು. ಈಕೆ ಸಾಮಾನ್ಯವಾಗಿ ಯಾರ ಮನೆಗೂ ಹೋದವಳಲ್ಲ. ಇವಳಿಗೂ ಮತ್ತೊಬ್ಬರ ಮನೆಯ ಕಲಹದ ಕುತೂಹಲವೆ? ಯಲ್ಲವ್ವನ ಮನೆಯಲ್ಲಿಯೂ ಎಷ್ಟೊಂದು ಕಲಹ ಕಾದಾಟ ಕಡಿದಾಟ! ಒಂದೊಂದು ಮನೆಯಲ್ಲಿ ಒಂದೊಂದು ರೀತಿಯ ಗೋಳುಗುದ್ದಾಟ. ಕಷ್ಟನಷ್ಟವಿಲ್ಲದ ಮನೆ ಎಲ್ಲಿದೆ! ಯಲ್ಲವ್ವ ತನ್ನ ಕಿರಿಯ ಮಗ ಸಿದ್ದಪ್ಪನ ಜೊತೆ ಬಂದಿದ್ದಾಳೆ. ಬಿತ್ತಲಿಕ್ಕೆ ದುಡ್ಡು ಕಡಿಮೆ ಬಿದ್ದಿದ್ದು ದೇವಪ್ಪ ಸಾಲ ಕೊಟ್ಟಾನೇನು ಎಂದು ಬಂದಿದ್ದಳು. ದುಂಡಪ್ಪ ಬೈಯ್ದ: ‘ಅಲ್ಲವಾ ತಂಗಿ, ಎಷ್ಟೊತ್ತಿನ್ಯಾಗ ಸಾಲ ಕೇಳಬೇಕು, ಎಷ್ಟೊತ್ತಿನ್ಯಾಗ ಕೇಳಬಾರದಂತ ಗೊತ್ತಿಲ್ಲೇನು? ಬೆಳಕಾಗ್ಲಿ. ಯೋಚನೆ ಮಾಡೋಣು. ದೇವಣ್ಣಂದೇ ಪಡಿಪಾಟಲು ಮುಗಿವಲ್ಲದು. ಅಂತಹದರಾಗ ನಿಂದೊಂದು ಬ್ಯಾರೆ.’

‘ದುಂಡಪ್ಪಣ್ಣ, ನೀ ಹೇಳೋದು ಖರೆ. ಶಿವಣ್ಣ ದುಡಿಲಾರದ ಅಡ್ಡ್ಯಾಡತಾನು. ನಾಗರತ್ನ ಬಂದಕೂಡಲೆ ಬಸಣ್ಣ ಬ್ಯಾರೆ ಮನಿ ಮಾಡ್ಯಾನು. ಸಿದ್ದು ಅಗದೀ ಸಣ್ಣ ಹುಡುಗ. ಇಂವನ ಸಾಲಿಗೆ ಸೈತ ರೊಕ್ಕ ಇಲ್ಲ. ನಾ ಹೆಂಗ ಬಾಳೆ ಮಾಡಲಿ ಹೇಳು? ನೀ ಒಂದು ಮಾತು ಹೇಳಿದ್ರ ದೇವಣ್ಣ ಸಾಲ ಕೊಡ್ತಾನ. ನಾಯೇನು ಅಂವನ ರೊಕ್ಕ ಇಟ್ಟಕೊಳ್ಳೋದಿಲ್ಲ. ಬೆಳಿ ಬಂದ ಕೂಡಲೆ ಮುಟ್ಟಿಸತೇನಿ.’

‘ಹೌದು ಬಿಡು. ಇಲ್ಲ ಯಾರು ಅಂದಾರು? ಕೊಡಿಸೋಣು. ನೀ ಮನಿಗೆ ನಡಿ. ಅನಸವ್ವ ಮಗಳೆ, ಮಲಕ್ಕೋ ಇನ್ನು. ನಾ ಹೇಳಿದ್ದನ್ನ ಸ್ವಲ್ಪ ಮನಸ್ಸಿಗೆ ತಗೋ. ಆಮ್ಯಾಲ ದೇವಣ್ಣ, ನೀ ನಮ್ಮ ಮನಿತನಕ ಬಾ. ನಿನ್ನ ಜೋಡಿ ಮಾತಾಡೋದೈತಿ. ಜಗಳ ಆದಾಗ ಯಾರಾದರೊಬ್ಬರು ಸ್ವಲ್ಪ ಹೊತ್ತು ದೂರ ಇರಬೇಕು. ನಸುಕಿಲೆ ನಮ್ಮ ಮನ್ಯಾಗಿಂದ ಬರೋವಂತೆ ಬಾ.’

ಕಲಹಗಳು ಅನೇಕ ಸಲ ದುರಂತದಲ್ಲಿ ಮುಗಿಯುವುದು ದುಂಡಪ್ಪನಿಗೆ ಗೊತ್ತು. ದೇವಣ್ಣನನ್ನು ಮನೆಗೆ ಕರೆದುಕೊಂಡು ನಡೆದ. ‘ದೇವ್ಯಾ, ಗಂಡಹೇಂತಿ ಜಗಳ ಎಲ್ಲರ ಮನಿಯೊಳಗು ಇರ್ತಾವೊ. ಯಾವುದೂ ಹದ್ದು ಮೀರಬಾರದು. ಊರಾಗ ನಿಮ್ಮ ಜಗಳದ್ದೇ ಮಾತು. ದೇವ್ಯಾ ಅನಸವ್ವನ ಕತಿ ಎಲ್ಲಿಗೆ ಬಂತು ಅಂತಾರ. ನೋಡು, ಒಂದು ವ್ಯಾಳೆ ಆಕಿ ತವರುಮನೆಯವರು ಜಗಳಕ್ಕ ಬಂದ್ರ ನಿನ್ನ ಬಾಳೆ ದಿಕ್ಕಾಪಾಲಾಕ್ಕೇತಿ. ಮೊದಲೆ ಅವರು ಕೆಟ್ಟ ಮಂದಿ. ಹುಷಾರದಿಂದ ಇರು. ಒಂದು ಇದ್ದದ್ದು ಒಂಬತ್ತು ಆದೀತು. ನನ್ನ ಕಥೀ ನಿನಗ ಗೊತ್ತೈತಲ್ಲ?’ ದುಂಡಪ್ಪಕಾಕಾನ ಸಂಸಾರದ ಕತೆ ಬಹುಶಃ ಎಲ್ಲರಿಗೂ ಗೊತ್ತಿದ್ದದ್ದೇ.

***

ಕಾಕಾನ ಸಲಹೆಯಂತೆ ಹೆಂಡತಿಗೆ ಪ್ರೀತಿಯಿಂದ ಮಾತಾಡಿಸಿ ಮಕ್ಕಳನ್ನು ಹತ್ತಿರ ಕರೆದು ಮುದ್ದಿಸುವನು. ಹೊಟೇಲಿನಲ್ಲಿ ಏನಾದರೂ

